**ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ**

**ಶಿವಮೊಗ್ಗ ನಗರ ಆಶ್ರಯ ಸಮಿತಿ**

**-: ಪ್ರಕಟಣೆ :-**

**ಸಂ:ಮನಪಾ /ಆಶ್ರಯ/ಜಿ+2/03/2018-19** **ದಿನಾಂಕ: 13-07-2018**

ಶಿವಮೊಗ್ಗ ನಗರದ ನಿವೇಶನರಹಿತರಿಗೆ ಗೋವಿಂದಾಪುರ ಹಾಗೂ ಗೋಪಿಶೆಟ್ಟಿಕೊಪ್ಪ ಗ್ರಾಮಗಳಲ್ಲಿ ಜಿ+2 ಮಾದರಿಯ ಮನೆಗಳನ್ನು ಹಂಚುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ (Online) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, 8941 ಅರ್ಜಿದಾರರು ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ್ದು, ಒಟ್ಟು 5168 ಅರ್ಜಿದಾರರು ನಿಗಧಿತ ಶುಲ್ಕವನ್ನು ಪಾವತಿಸಿರುತ್ತಾರೆ. ಅರ್ಜಿದಾರರ ಪ್ರಾಥಮಿಕ ಮಾಹಿತಿಯೊಂದಿಗೆ ಅರ್ಜಿದಾರರ BPL ಪಡಿತರ ಚೀಟಿ, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರದ ಮಾಹಿತಿಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ಜಾಲತಾಣದ ಮುಖಾಂತರವೇ ಪಡೆಯಲಾಗಿರುತ್ತದೆ. ಹಾಗೂ ಕಂದಾಯ ಶಾಖೆಯ ಕರವಸೂಲಿಗಾರರಿಂದ mobile app ಜಿಯೋ ಟ್ಯಾಗ್ ಮುಖಾಂತರ ಅರ್ಜಿದಾರರ ಭಾವಚಿತ್ರ, ಆಧಾರ್ ಮತ್ತು BPL ಪಡಿತರ ಚೀಟಿಯ ಭಾವಚಿತ್ರಗಳನ್ನು ಸ್ಥಳ ಪರಶೀಲನಾ ವರದಿಯ ಸಮಯದಲ್ಲಿ ಪಡೆಯಲಾಗಿದ್ದು ಈ ಎಲ್ಲಾ ಮಾಹಿತಿಯನ್ನು ಆಧರಿಸಿ, ಪರಿಶೀಲಿಸಿ ಸಿದ್ದಪಡಿಸಿರುವ 2017-18ನೇ ಸಾಲಿನ ಅರ್ಹ ಮತ್ತು ಅನರ್ಹನ್ನೊಳಗೊಂಡ ನಿವೇಶನ ರಹಿತರ ಪಟ್ಟಿಯನ್ನು ಆಶ್ರಯ ಶಾಖೆಯ ಸೂಚನಾ ಫಲಕದಲ್ಲಿ ಹಾಗೂ shivamoggacitycorp.org ಜಾಲತಾಣದಲ್ಲಿ ಪ್ರಚುರ ಪಡಿಸಿ, ಈ ಬಗ್ಗೆ ಆಕ್ಷೇಪಣೆಗಳನ್ನು ದಿನಾಂಕ 27-02-2018ರಂದು ಪ್ರಕಟಣೆಯನ್ನು ಹೊರಡಿಸಲಾಗಿತ್ತು ಅದರಂತೆ ಒಟ್ಟು 206 ಆಕ್ಷೇಪಣೆಗಳು ಈ ಕಛೇರಿಗೆ ಸಲ್ಲಿಕೆಯಾಗಿದ್ದು ಅವುಗಳನ್ನು ಕಂದಾಯ ಶಾಖೆಯಿಂದ ಪುನರ್ ಪರಿಶೀಲಿಸಿ, ಅಂತಿಮವಾಗಿ ಆಶ್ರಯ ಸಮಿತಿ ತೀರ್ಮಾನದಂತೆ 4725 ಅರ್ಹ 2017-18ನೇ ಸಾಲಿನ ಅಂತಿಮ ನಿವೇಶನರಹಿತರ ಪಟ್ಟಿಯನ್ನು ಸಿದ್ದಪಡಿಸಿ ಕಛೇರಿಯ ಸೂಚನಾ ಫಲಕದಲ್ಲಿ, ಜಾಲತಾಣದಲ್ಲಿ ಪ್ರಚುರ ಪಡಿಸಲಾಗಿರುತ್ತದೆ. 2017-18ನೇ ಸಾಲಿನ ನಿವೇಶನರಹಿತರ ಪಟ್ಟಿಯಲ್ಲಿ ಅರ್ಹರಾದ ಎಲ್ಲಾ ಫಲಾನುಭವಿಗಳು **ಬಿ.ಪಿ.ಎಲ್ ಪಡಿತರ ಚೀಟಿ, ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ(ರೂ.86700/- ಒಳಗಿರತಕ್ಕದ್ದು), ಜಾತಿ ಪ್ರಮಾಣ ಪತ್ರ, ವಿಶೇಷವರ್ಗದಡಿ ಮೀಸಲಾತಿ ಕೋರಿರುವರು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನೀಡಿದಂತಹ ಪ್ರಮಾಣಪತ್ರ**ದ ಮೂಲ ದಾಖಲೆ ಮತ್ತು ನಕಲು ಪ್ರತಿಗಳನ್ನು ಕಡ್ಡಾಯವಾಗಿ ಆಶ್ರಯ ಕಛೇರಿಗೆ, ಕಛೇರಿ ವೇಳೆಯಲ್ಲಿ ಹಾಜರುಪಡಿಸತಕ್ಕದ್ದು.

**ಸಹಿ/-**
**ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ**
**ನಗರ ಆಶ್ರಯ ಸಮಿತಿ ಮಹಾನಗರಪಾಲಿಕೆ, ಶಿವಮೊಗ್ಗ**

**ಸಹಿ/-**
**ಅಧ್ಯಕ್ಷರು ನಗರ ಆಶ್ರಯ ಸಮಿತಿ**
**ಹಾಗೂ ಶಾಸಕರು, ಶಿವಮೊಗ್ಗ. ನಗರ.**